ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರ: 2059/2012

ಚಾಸಾ: 5 ಪ್ರಾಸಾ:3

ದಿನಾಂಕ: 02.03.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಡಾ. ಆರತಿ |
| ಗಂಡನ ಹೆಸರು | : | ಡಾ. ನಾಗಭೂಷಣ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿ |
| ವಾಸ ಸ್ಥಳ | : | ಬೀಜಾಡಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು 2009 ರಿಂದ 2019ರವರೆಗೆ ಕುಂದಾಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ಸ್ತ್ರೀ ರೋಗ ತಜ್ಞೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 06.05.2012 ರಂದು ಬೆಳಿಗ್ಗೆ 9.40 ಗಂಟೆ ಸಮಯಕ್ಕೆ ಚಾಸಾ-2ರವರು ಚಾಸಾ.1ರವರನ್ನು ಕರೆ ತಂದಿದ್ದು, ಹಲ್ಲೆ ಮಾಡಿರುವುದಾಗಿ ಆಪಾದಿಸಿದ್ದು, ಅವರನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. ಬಲಕಾಲಿನ ಮುಂಭಾಗದಲ್ಲಿ ಹಾಗೂ ಎಡಕೈಯ ಮೇಲೆ ತರಚಿದ ಗಾಯ
2. ಗಲ್ಲದ ಮೇಲೆ 2 ಸೆಂಟಿಮೀಟರಿನ ಹರಿದ ಗಾಯ
3. ಎಡಕೆನ್ನೆ ಮತ್ತು ತುಟಿಯಲ್ಲಿ ಊತ ಇತ್ತು.

ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿದ್ದು, ಗಾಯಗಳ ವಯಸ್ಸನ್ನು ಹೇಳಲು ಸಾಧ್ಯವಿಲ್ಲ ಈ ಬಗ್ಗೆ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಸದ್ರಿ ಗಾಯದ ಪ್ರಮಾಣ

ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-4 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಪೊಲೀಸರು ಹಲ್ಲೆಗೆ ಉಪಯೋಗಿಸಲಾಗಿದೆ ಎಂಬ ಕಲ್ಲನ್ನು ಹಾಜರುಪಡಿಸಿ ನನ್ನ ಅಭಿಪ್ರಾಯ ಪಡೆದಿಲ್ಲ. ಹಲ್ಲೆ ಮಾಡಿದ ವ್ಯಕ್ತಿಗಳ ಹೆಸರನ್ನು ಚಾಸಾ.1ರವರೇ ತಿಳಿಸಿರುತ್ತಾರೆ. ಆತ 1ನೇ ಆರೋಪಿಯ ಹೆಸರನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯಕ್ತಿಗಳ ಹೆಸರನ್ನು ಹೇಳಿಲ್ಲ ಎಂದರೆ ಸರಿ. ಯಾವುದೇ ಒಬ್ಬ ವ್ಯಕ್ತಿ ಗಟ್ಟಿಯಾದ ನೆಲದ ಮೇಲೆ ಬಿದ್ದಾಗ ನಿಪಿ.4 ರಲ್ಲಿ ನಮೂದಿಸಿದ ಗಾಯಗಳು ಸಂಭವಿಸುವ ಸಾಧ್ಯತೆ ಇರುತ್ತವೆ. ಘಟನೆಯಾದ ಸಮಾರು 10 ಗಂಟೆಗಳ ನಂತರ ಚಾಸಾ.1ರವರು ನಮ್ಮ ಆಸ್ಪತ್ರೆಗೆ ಬಂದಿದ್ದರು ಎಂದರೆ ಸರಿ. ಅದಕ್ಕೂ ಮೊದಲು ಬೇರೆ ಆಸ್ಪತ್ರೆಗೆ ಭೇಟಿ ನೀಡಿರುವ ಬಗ್ಗೆ ತಿಳಿದು ಬಂದಿರುವುದಿಲ್ಲ. ಅವರನ್ನು ಒಳರೋಗಿಯಾಗಿ ದಾಖಲಿಸಿಕೊಂಡಿದ್ದೆವು.

ಎಷ್ಟು ಸಮಯದ ಮೊದಲು ಸದ್ರಿ ಗಾಯಗಳು ಸಂಭವಿಸಿತ್ತು ಎಂದು ನಮೂದಿಸಿರುವುದಿಲ್ಲ. ನಿಪಿ.4 ರಲ್ಲಿ ನಮೂದಿಸಿದ ಗಾಯಗಳು ಚಾಸ.1ರವರಿಗೆ ಹಲ್ಲೆಯಿಂದ ಸಂಭವಿಸಿಲ್ಲ ಎಂದರೆ ನನಗೆ ಹೇಳಲು ಸಾಧ್ಯವಿಲ್ಲ. ಆರೋಪಿಗೂ ಮತ್ತು ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ನನಗೆ ತಿಳಿದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**